ಮಂದಹಾಸ

ತಾಯ ಗರ್ಭದಲ್ಲಿ ಚಕ್ರವ್ಯೂಹದ ಪಾಠ ಕಲಿತ ಅಭಿಮನ್ಯುವಿನಂತೆ ಇಂದಿನ ಮಕ್ಕಳಿಗೆ ಇಂತಹ ವಿದ್ಯೆಗಳೆಲ್ಲಾ ಗರ್ಭಗತವಾಗಿರುತ್ತವೆ. ಅವು ಸೋಷಿಯಲ್ ಮೀಡಿಯಾದಲ್ಲಿ ಸ್ಟೇಟಸ್ ಹಾಕಿಕೊಂಡೇ ಈ ಲೋಕಕ್ಕೆ ಅಡಿಯಿರಿಸುತ್ತವೆ. ಕಲಿಸಿದ್ದನ್ನು ಅರ್ಧ ಕೇಳಿಸಿಕೊಂಡು, ಕಾಲು ಭಾಗ ಅರ್ಥೈಸಿಕೊಂಡು ಮುಕ್ಕಾಲು ಭಾಗ ಮರೆಯುವ ದೊಡ್ಡವರು ಆನ್‌ಲೈನ್ ಶಾಪಿಂಗ್ ಮಾಡಿ ಆಗಾಗ ಯಾಮಾರುವುದು, ಒಟಿಪಿ ಹೇಳಿ ತಲೆಗೆ ತಂದುಕೊಳ್ಳುವುದೇ ಹೆಚ್ಚು.



# ದೊಡ್ಡವರೆಲ್ಲಾ ಜಾಣರಲ್ಲ...

■ ಸುಮಾ ರಮೇಶ್
ಕಲೆ: ಸಂತೋಷ್ ಸಸಿಹಿತ್ಲು

ಎಂಬತ್ತರ ದಶಕದಲ್ಲಿ ತೆರೆಯ ಮೇಲೆ ಭಾರೀ ಸದ್ದು ಮಾಡಿದ 'ಗುರು ಶಿಷ್ಯರು' ಚಿತ್ರದಲ್ಲಿ ದ್ವಾರಕೀಶ್ ಅಂಡ್ ಟೀಮ್ 'ದೊಡ್ಡವರೆಲ್ಲಾ ಜಾಣರಲ್ಲ... ಚಿಕ್ಕವರೆಲ್ಲಾ ಕೋಣರಲ್ಲಾ...' ಎಂದು ಜುಟ್ಟು ಕುಣಿಸುತ್ತಾ ಹಾಡಿದ ಹಾಡು ಆಗ ಪ್ರೈಮರಿ ಶಾಲೆಯಲ್ಲಿದ್ದ ನಮಗೆ ವಿಚಿತ್ರವಾದ ಪುಳಕ ನೀಡಿತ್ತು. ಅದುವರೆಗೂ ಗುರುಹಿರಿಯರಲ್ಲಿ ಭಕ್ತಿ ಇರಬೇಕು ಅವರು ಹೇಳುವ ಮಾತೇ ವೇದವಾಕ್ಯ ಎಂದು ಕಾಪಿರೈಟಿಂಗ್ ಬರೆದೂ ಬರೆದೂ ಸುಸ್ತಾಗಿದ್ದ ನಾವು ಈ ಹೊಸ ಗೀತೆಯ ಸಾಹಿತ್ಯಕ್ಕೆ ಕಣ್ಣರಳಿಸಿದ್ದೆವು. ಕಿರಿಯರ ಸಲಹೆ, ಸೂಚನೆ, ಅಭಿಪ್ರಾಯಗಳಿಗೆ ಅಂದು ಹಿರಿತಲೆಗಳು ಯಾವುದೇ ಕಿಮ್ಮತ್ತು ನೀಡದೆ 'ತಲೆಹರಟೆ ಆಡ್ಬೇಡಿ, ಸುಮ್ನೆ ದೊಡ್ಡವ್ರ್ ಹೇಳ್ದಷ್ಟ್ ಕೇಳಿ' ಎಂದು ಬಾಯಿ ಮುಚ್ಚಿಸುತ್ತಿದ್ದರು.

ಒಂದು ಕಾಲದಲ್ಲಿ ಆ ಹಿರಿಯರೂ ಸಾಧಾರಣ ವಿದ್ಯಾರ್ಥಿಗಳೇ ಎಂಬುದನ್ನು